**Online Newspaper Clipping Service**
**Dtd-Tuesday, 13th, October- 2020**



ವಿಜಯ ಕರ್ನಾಟಕ

114 ಸೋಂಕಿತರಿಂದ 2 ಗಂಟೆಗಳ ಕಾಲ ಅಭಿಪ್ರಾಯ ಸಂಗ್ರಹ | ಸೌಲಭ್ಯಗಳ ಕುರಿತು ಮೆಚ್ಚುಗೆ

# ಪಿಪಿಇ ಕಿಟ್ ಧರಿಸಿ ಕೋವಿಡ್ ಆಸ್ಪತ್ರೆಗೆ ಜಿಲ್ಲಾಧಿಕಾರಿ ಭೇಟಿ

**ವಿಕ ಸುದ್ದಿಲೋಕ** ಕೋಲಾರ

ಪಿಪಿಇ ಕಿಟ್ ಧರಿಸಿ ಎಸ್‌ಎನ್‌ಆರ್ ಕೋವಿಡ್ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೊರೊನಾ ಸೋಂಕಿತ 114 ಮಂದಿ ಬಳಿಗೂ ತೆರಳಿ ಸುಮಾರು 2 ಗಂಟೆಗಳ ಕಾಲ ಅಭಿಪ್ರಾಯಗಳನ್ನು ಸಂಗ್ರಹಿಸಿದರು.

ಆಸ್ಪತ್ರೆಯಲ್ಲಿನ ಸೌಲಭ್ಯಗಳ ಕುರಿತು ಖುದ್ದು ಪರಿಶೀಲನೆಗಾಗಿ ಬೆಳಗ್ಗೆ 9 ಗಂಟೆಗೆ ಆಗಮಿಸಿ 11 ಗಂಟೆಯವರೆಗೂ ಆಸ್ಪತ್ರೆಯ ಎಲ್ಲ ವಾರ್ಡ್‌ಗಳಿಗೂ ಭೇಟಿ ನೀಡಿ, ಮಾಹಿತಿ ಪಡೆದುಕೊಂಡು, ಸೌಲಭ್ಯಗಳು ಉತ್ತಮವಾಗಿದ್ದ ಹಿನ್ನೆಲೆಯಲ್ಲಿ ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ 114 ಮಂದಿ ಕೊರೊನಾ ರೋಗಿಗಳಿದ್ದು, ಎಲ್ಲರ ಬಳಿಗೂ ತೆರಳಿ ಅಭಿಪ್ರಾಯಗಳನ್ನು ಪಡೆದುಕೊಳ್ಳಲಾಗಿದೆ. ಸರಕಾರಿ ಆಸ್ಪತ್ರೆಯಲ್ಲಿ ಇಷ್ಟು ಸೌಲಭ್ಯಗಳಿರುವುದು ಸಂತಸವಾಗಿದೆ. ಶೌಚಾಲಯ, ಫ್ಲೋರ್ ಮ್ಯಾಟ್ ಹಾಕಿಸುವುದು ಸೇರಿದಂತೆ ಸಣ್ಣಪುಟ್ಟ ಸಮಸ್ಯೆಗಳನ್ನು ಹೊರತುಪಡಿಸಿ ಉಳಿದೆಲ್ಲವೂ ಸಮರ್ಪಕವಾಗಿವೆ ಎಂದರು.

ವೈದ್ಯರೂ ಸ್ಪಂದಿಸುತ್ತಿರುವುದರಿಂದಾಗಿ ರೋಗಿಗಳೂ ಹರ್ಷ ವ್ಯಕ್ತಪಡಿಸಿದ್ದು ನನಗೂ ತೃಪ್ತಿಯಾಗಿದೆ. ಊಟ, ಔಷಧಗಳು ಉತ್ತಮವಾಗಿದ್ದು, ಒಂದೆರಡು ಔಷಧ ಕೊರತೆಯಿದೆ. ಕೂಡಲೇ ಪೂರೈಸಲಾಗುವುದು. ಕೋವಿಡ್‌ಗೂ ಮುನ್ನ ಆಸ್ಪತ್ರೆಗೆ ಬಣ್ಣ ಬಳಿಸಿದ್ದು, ವಾರ್ಡ್‌ಗಳು ಉತ್ತಮವಾಗಿವೆ. ರೋಗಿಗಳು ಗುಣಮುಖರಾಗುತ್ತಿದ್ದು, ಆಕ್ಸಿಜನ್ ಘಟಕದಿಂದ 185 ಬೆಡ್‌ಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಆಸ್ಪತ್ರೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿದ್ದು, ಉಳಿದ ಆಸ್ಪತ್ರೆಗಳಿಗೆ ಹೋಲಿಸಿದರೆ ಸಾಕಷ್ಟು ಉತ್ತಮವಾಗಿದೆ ಎಂದರು.



ಎಸ್‌ಎನ್‌ಆರ್ ಕೋವಿಡ್ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ್ದ ಡಿಸಿ ಸಿ.ಸತ್ಯಭಾಮ ಸುದ್ದಿಗಾರರೊಂದಿಗೆ ಮಾತನಾಡಿದರು.

## 147 ಸಕ್ರಿಯ ಪ್ರಕರಣಗಳು, 27 ಮಂದಿಗೆ ಐಸಿಯುನಲ್ಲಿ ಚಿಕಿತ್ಸೆ

ಎಸ್‌ಎನ್‌ಆರ್ ಆಸ್ಪತ್ರೆ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಸ್.ಜಿ.ನಾರಾಯಣಸ್ವಾಮಿ ಮಾತನಾಡಿ, ಜಿಲ್ಲಾಸ್ಪತ್ರೆಯಲ್ಲಿ ಈವರೆಗೆ 4867 ಮಂದಿ ಒಳರೋಗಿಗಳಾಗಿ ಕೋವಿಡ್‌ಗೆ ದಾಖಲಾಗಿದ್ದು, ಸದ್ಯ 147 ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈವರೆಗೆ 13 ವರ್ಷದೊಳಗಿನ 167 ಮಂದಿ ಮಕ್ಕಳು, 94 ಗರ್ಭಿಣಿಯರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ಪ್ರಸ್ತುತ ಇರುವ 147 ಮಂದಿ ಪೈಕಿ 27 ಮಂದಿ ಐಸಿಯುನಲ್ಲಿದ್ದಾರೆ. ಈವರೆಗೆ ಒಟ್ಟು 60-65 ವರ್ಷ ಮೇಲ್ಪಟ್ಟ 31 ಮಂದಿ ಮೃತಪಟ್ಟಿದ್ದು, ಕಿಡ್ನಿ, ಡಯಾಲಿಸಿಸ್, ಕ್ಯಾನ್ಸರ್ ಸೇರಿದಂತೆ ನಾನಾ ಕಾಯಿಲೆಗಳನ್ನು ಅವರು ಎದುರಿಸುತ್ತಿದ್ದರು ಎಂದು ಸ್ಪಷ್ಟಪಡಿಸಿದರು.

**ವೈದ್ಯರು, ಸಿಬ್ಬಂದಿ ದೇವರುಗಳಂತೆ:** ವೈದ್ಯರ ಬಗ್ಗೆ ಹೊರಗಡೆ ನಿಂತು ಬಹಳಷ್ಟು ಮಾತನಾಡುತ್ತೇವೆ. ಪಿಪಿಇ ಕಿಟ್ ಧರಿಸಿ ಕೆಲಸ ಮಾಡುವುದು ಸುಲಭವಲ್ಲ, ನಾವು 2 ಗಂಟೆ ಧರಿಸಿದ್ದಕ್ಕೇ ಇಷ್ಟು ಬೆವತಿದ್ದೇವೆ. ಇನ್ನು 5-6 ಗಂಟೆಗಳು ಕೆಲಸ ಮಾಡುತ್ತಿರುವುದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಬೇಕಿದೆ. ಇಲ್ಲಿನ ಸ್ವಚ್ಛತಾ ಸಿಬ್ಬಂದಿಯ ಶ್ರಮವೂ ಸಾಕಷ್ಟಿದೆ. ಒಟ್ಟಾರೆ ಇವರೆಲ್ಲರೂ ನಮ್ಮ ದೇವರುಗಳಿದ್ದಂತೆ ಎಂದರು.

**ಪ್ರೀತಿಗಷ್ಟೇ ಹೊರಗಿನ ಊಟ:** ಆಸ್ಪತ್ರೆಯಲ್ಲಿ ಊಟದ ವ್ಯವಸ್ಥೆ ಉತ್ತಮವಾಗಿದ್ದರೂ ಹೊರಗಿನ ಊಟ ತಂದುಕೊಡಲಾಗುತ್ತಿದೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಡಿಸಿ, ಅದು ಅವರ ಪ್ರೀತಿಗೆ ತಂದು ಕೊಡಲಾಗುತ್ತಿದೆ. ನಮ್ಮವರು ಆಸ್ಪತ್ರೆಯಲ್ಲಿದ್ದಾಗ ಅಷ್ಟೂ ಮಾಡಲಿಲ್ಲವೆಂದರೆ ಹೇಗೆ ಎನ್ನುವ ಮನೋಭಾವದಿಂದ ಊಟ ತಂದು ಕೊಡಲಾಗುತ್ತಿದೆ ಎದರು.

ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಲಾಗುವುದು. ಜಿಲ್ಲಾಸ್ಪತ್ರೆ ಆವರಣದಲ್ಲಿ ಶನಿವಾರದಂದು ಸ್ವಚ್ಛ ಶನಿವಾರ ಕಾರ್ಯಕ್ರಮ ನಡೆಸಲಾಗುವುದು ಎಂದು ಹೇಳಿದರು. ಡಿಎಚ್‌ಒ ಡಾ.ಎಸ್.ಎನ್.ವಿಜಯ್‌ಕುಮಾರ್ ಸೇರಿದಂತೆ ನುರಿತ ವೈದ್ಯ ತಂಡದ ಪದಾಧಿಕಾರಿಗಳಿದ್ದರು.